

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**

ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೨

“ಅರೇ, ಕೆಂಡ ಆರಿಯೇ ಹೋಗಿದೆ, ಸ್ವಲ್ಪ ಹೊತ್ತಿಸಿ ಕೊಡ್ತೀಯಾ?” ತುಂಬ ಸಂಕೋಚದಿಂದ ಸೇವಕನನ್ನು ಕೇಳುತ್ತಿದ್ದಾರೆ, ದೊಡ್ಡ ಅಪರಾಧ ಮಾಡಿದವರಂತೆ. ಸೇವಕನು ಅರ್ಧ ಫರ್ಲಾಂಗ್ ದೂರದಲ್ಲಿದ್ದ ಅಡುಗೆ ಮನೆಗೆ ಓಡಿದ. ಬೆಂಕಿಕಡ್ಡಿಯಿಂದ ಇದ್ದಿಲನ್ನು ಹೊತ್ತಿಸಿ ತಂಬಾಕಿಗೆ ಅಲ್ಲೇ ಬೆಂಕಿಯನ್ನು ಸುಲಭವಾಗಿ ಉರಿಸಬಹುದಿತ್ತು. ಸಮಯವೂ ಉಳಿಯುತ್ತಿತ್ತು. ದಿನದಲ್ಲಿ ಹತ್ತು ಹದಿನೈದು ಬಾರಿ ಈ ಕಟ್ಟಡದಿಂದ ಆ ಕಟ್ಟಡಕ್ಕೆ ಓಡಾಡುವುದು ಕಷ್ಟಕರ. ಆದರೂ ಈ ಹಿರಿಯರಿಗಾಗಿ ಕಷ್ಟ ತೆಗೆದುಕೊಳ್ಳುವುದರಲ್ಲಿ ಒಂದು ಆನಂದವಿದೆ. ತಮ್ಮ ಅನಾನುಕೂಲದ ಬಗ್ಗೆ ಏನಾದರೂ ಹೇಳಿದರೆ, ಮಹಾರಾಜರು ಖಿನ್ನರಾಗದೆ, ತಕ್ಷಣವೇ ಆ ಕೆಲಸದ ಭಾರವನ್ನು ತಾವೇ ವಹಿಸಿಕೊಳ್ಳುವರು ಎಂಬುದನ್ನು ಸೇವಕನೂ ಬಲ್ಲ. ಕಿಂಚಿತ್ತೂ ಕೋಪಿಸಿಕೊಳ್ಳುವುದಿಲ್ಲ ಅಥವಾ ‘ಇಲ್ಲ, ನೀನಿದನ್ನು ಮಾಡಲೇಬೇಕು’ ಎಂದೂ ಆದೇಶಿಸುವುದೂ ಇಲ್ಲ. ತಾವು ನಡೆಸಿಕೊಂಡು ಬಂದಂತಹ ಕೃಚ್ಛ್ರತೆಯನ್ನು ಇನ್ನೊಬ್ಬರ ಮೇಲೆ ಹೇರುವಂತಹ ಸ್ವಭಾವ ಅವರದ್ದಲ್ಲ; ಯಾರಾದರೂ ತಾವಾಗಿಯೇ ಸಹಕರಿಸಿದರೆ ಸರಿ, ಇಲ್ಲವಾದರೆ ಸ್ವಲ್ಪವೂ ಅಸಮಾಧಾನವಿಲ್ಲ.

ಕೊಲ್ಕತ್ತೆಯ ಬಾಗ್ ಬಜಾರಿನ ‘ಮಾಯೇರ್ ಬಾಡಿ’ (‘ಶ್ರೀಮಾತೆಯವರ ಮನೆ’, ‘ಉದ್ಬೋಧನ’)ಯಲ್ಲಿ ಸ್ವಾಮಿ ರಮಾನಂದರು (ಕ್ಷೀರೋದ) ಸ್ನಾನಯಾತ್ರೆಯ ರಾತ್ರಿ ತಮ್ಮ ದೇಹತ್ಯಾಗ ಮಾಡಿದರು ಎಂಬ ವಿಷಯವು ಕೊಲ್ಕತ್ತೆಯಿಂದ ಬಂದ ಪತ್ರವೊಂದರಿಂದ ತಿಳಿದುಬಂತು. ಸ್ನಾನಯಾತ್ರೆಯಂದು ಈ ಪಹಾಡಿಯಲ್ಲಿ ಸಾಧುಗಳು ಹಾಗೂ ಬೇರೆಡೆಗಳಿಂದ ಬಂದಿದ್ದ ಭಕ್ತರು ಸೇರಿ ವಿರಜಾನಂದರ ೭೧ನೇ ಜನ್ಮದಿನವನ್ನು ಅದೆಷ್ಟು ಆನಂದದಿಂದ ಆಚರಿಸಿದ್ದರು; ಅಂದೇ ರಾತ್ರಿ ತಮ್ಮ ೪೦ ವರ್ಷ ವಯಸ್ಸಿನಲ್ಲಿ ಎಲ್ಲರ ಪ್ರೀತಿಗೆ ಪಾತ್ರರಾದ ಸರಳ ಸ್ವಭಾವದ ಆ ವಿರಾಗಿಯು ಪ್ರಾರಬ್ಧವನ್ನು ಸವೆಸಿ ನಡೆದೇಬಿಟ್ಟಿದ್ದರು. ವಿರಜಾನಂದರು ಅವರನ್ನು ತುಂಬ ಇಷ್ಟಪಡುತ್ತಿದ್ದರು. ಕ್ಷೀರೋದರೂ ಸಹ ಶ್ರೀಮಾತೆಯವರಿಂದ ದೀಕ್ಷೆ ಪಡೆದವರಾಗಿದ್ದರು; ಆಗ ಅವರ ವಯಸ್ಸು ೧೫ನ್ನೂ ಮುಟ್ಟಿರಲಿಲ್ಲ. ಶ್ರೀಮಾತೆಯವರು ಹುಡುಗನನ್ನು ನೋಡಿ, ‘ಅಯ್ಯೋ! ಇನ್ನೂ ಎಳೆ ವಯಸ್ಸು ಈ ಹುಡುಗನದು’ ಎಂದಿದ್ದರು. ಪೂಜ್ಯ ಅಖಂಡಾನಂದರು ಅವರಿಗೆ ಸಂನ್ಯಾಸವನ್ನು ನೀಡಿದ್ದರು. ಕ್ಷೀರೋದನದು ಬಾಲ್ಯಾರಭ್ಯ ಅತಿ ಶುದ್ಧವಾದ ಜೀವನ. ಅವರಿಗೆ ಅಣ್ಣನೊಬ್ಬನಿದ್ದು, ಅವರೂ ಸಹ ಮಠದ ಸಂನ್ಯಾಸಿಗಳಾಗಿದ್ದರು. ಅಮೆರಿಕಾದ ಪ್ರಾವಿಡೆನ್ಸ್ ವೇದಾಂತ ಕೇಂದ್ರದ ಪರಿಚಾಲಕರಾದ ಸ್ವಾಮಿ ಅಖಿಲಾನಂದರೇ ಅವರು. ಹೃದ್ರೋಗವನ್ನು ಹೊಂದಿದ್ದರೂ ರಮಾನಂದರು ‘ಉದ್ಬೋಧನ ಕಾರ್ಯಾಲಯ’ದ ಪತ್ರಿಕಾ ಪ್ರಕಾಶನದ ವಿಭಾಗದಲ್ಲಿ ಅಧಿಕವಾಗಿ ಶ್ರಮಿಸುತ್ತಿದ್ದರು. ಪ್ರಪಂಚದ ಆಕರ್ಷಣೆಗಳನ್ನೆಲ್ಲ ತುಚ್ಛಗೊಳಿಸಿ, ಯಾರು ಯುಗ ಪ್ರವರ್ತಕನ ಆಹ್ವಾನಕ್ಕೆ ಓಗೊಟ್ಟು ವೈರಾಗ್ಯ ಪಥವನ್ನವಲಂಬಿಸುತ್ತಾರೋ, ತಮ್ಮ ದೇಹ-ಮನ-ಪ್ರಾಣಗಳನ್ನು ಆ ಆದರ್ಶಕ್ಕಾಗಿ ಒತ್ತೆಯಿಡುತ್ತಾರೋ ಅಂತಹವರು ಸಾವಿರಕ್ಕೂ ಒಬ್ಬರೂ ಸಿಗರು. ಶ್ರೀರಾಮಕೃಷ್ಣ-ವಿವೇಕಾನಂದರ ಒಬ್ಬೊಬ್ಬ ಸೈನಿಕನೂ ತಯಾರಾಗುವುದು ಬಹುಕಾಲದ ಕಠಿಣ ಸಾಧನೆಗಳಿಂದ. ಇಂತಹವರ ಜೀವನದಿಂದ ಅದೆಷ್ಟು ಶಕ್ತಿ ಪ್ರಕಾಶವಾಗುತ್ತಿತ್ತೋ, ಅದೆಷ್ಟು ಮಂಗಳ ಕಾರ್ಯಗಳು ಜರಗುತ್ತಿದ್ದವೋ; ಭವಿಷ್ಯದ ಅದೆಷ್ಟು ಆಗುಹೋಗುಗಳು ಇಂತಹವರನ್ನು ಎದುರು ನೋಡುತ್ತಿದೆಯೋ! ಇಂತಹದೊಂದು ಜೀವನ ದೀಪವು ಅಕಾಲದಲ್ಲಿ ನಂದಿಹೋದುದು ದುಃಖದ ವಿಷಯವಷ್ಟೇ ಅಲ್ಲ, ಸಂಘದ ದೃಷ್ಟಿಯಿಂದಲೂ, ದೇಶದ ದೃಷ್ಟಿಯಿಂದಲೂ ಭರಿಸಲಾಗದ ನಷ್ಟ. ರಮಾನಂದರ ಮರಣವಾರ್ತೆಯನ್ನು ಕೇಳಿದ ವಿರಜಾನಂದರು ಶ್ಯಾಮಲಾತಾಲ್‌ನಲ್ಲಿ ಕುಳಿತು ಈ ವಿಷಯಗಳನ್ನೇ ಆಲೋಚಿಸುತ್ತಿದ್ದರು.

ಐದು ವರ್ಷಗಳ ನಂತರವೂ ಇದೇ ರೀತಿಯ ಮತ್ತೊಂದು ಆಘಾತ ಕಾದಿತ್ತು. ಆ ಸಲವೂ ಸ್ನಾನಯಾತ್ರೆಯ ರಾತ್ರಿ ಅವರಿಗೆ ಅತ್ಯಂತ ಪ್ರಿಯರಾದ ಸಂಘದ ನಿಷ್ಠಾವಂತ ಕಾರ್ಯಕರ್ತರೂ ಆದ ಪ್ರೌಢ ಬ್ರಹ್ಮಚಾರಿ ‘ಮಾತೃಕಾ ಚೈತನ್ಯ’ (ಗೌರಿ ಮೋಹನರು) ಹೃದಯಾಘಾತದಿಂದಾಗಿ ಅನಿರೀಕ್ಷಿತವಾಗಿ ಮೃತರಾದರು. ಆ ವರ್ಷ (೧೯೪೯) ವಿರಜಾನಂದರು ಬೇಲೂರು ಮಠದಲ್ಲಿಯೇ ಇದ್ದರು. ಅವರ ಜನ್ಮದಿನದ ದೊಡ್ಡ ಸಮಾರಂಭದ ಆಯೋಜನೆಯೇ ನಡೆದಿತ್ತು. ಇಡೀ ದಿನ ಗೌರೀ ಮೋಹನರು ಈ ಸಮಾರಂಭಕ್ಕೆ ಸಂಬಂಧಿಸಿದ ಅನೇಕ ಕೆಲಸಗಳನ್ನು ಮಾಡಿದರು, ಸಂಜೆ ತಮ್ಮ ಕೇಂದ್ರವಾದ ಬಲರಾಮ ಮಂದಿರಕ್ಕೆ ಹಿಂದಿರುಗಿ, ಆಯಾಸವೆಂದು ಮಲಗಿದರು. ಮತ್ತೆ ಏಳಲೇ ಇಲ್ಲ. ರಾತ್ರಿ ಈ ದುಃಖ ಸಮಾಚಾರವು ಮಠಕ್ಕೆ ತಲುಪಿತು. ಇವರು ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾಗಿದ್ದ ಭಕ್ತ ಮನಮೋಹನ

ಮಿತ್ರರ ಏಕೈಕ ಪುತ್ರರಾಗಿದ್ದರು. ಯುವಕರಾಗಿದ್ದಾಗ ರಾಜಕೀಯ ಮತ್ತು ಸಮಾಜಸೇವೆಯ ಕೆಲಸದಲ್ಲಿ ನಿರತರಾಗಿದ್ದು, ಪ್ರೌಢವಯಸ್ಸಿನಲ್ಲಿ ವೈರಾಗ್ಯದ ಉದಯವಾಗಿತ್ತು. ಮಠದ ಸಾಮಾನ್ಯ ನಿಯಮಕ್ಕೆ ವ್ಯತಿರಿಕ್ತವಾಗಿ ವಿರಜಾನಂದರು ಇವರಿಗೆ ಸಂಘದಲ್ಲಿ ಸ್ಥಾನ ನೀಡಿದ್ದರು. ವಯಸ್ಸಾಗಿದ್ದರೂ ಗೌರೀಮೋಹನರ ಕರ್ಮೋದ್ಯಮವು ಅದ್ಭುತವಾಗಿತ್ತು. 'ನಿವೇದಿತಾ ಬಾಲಕಿಯರ ವಿದ್ಯಾಲಯ'ದ ಜವಾಬ್ದಾರಿಯುತ ಕೆಲಸವಾದ ಸೆಕ್ರೆಟರಿ ಸ್ಥಾನಕ್ಕೆ ಇವರನ್ನು ನೇಮಿಸಲಾಗಿತ್ತು.

* * *

ಮೇಲಿಂದ ಮೇಲೆ ಕರೆಯೋಲೆಗಳು ಬರುತ್ತಲಿವೆ. 'ಮಹಾರಾಜ್, ನೀವು ಈ ಕಡೆ ಬರಲೇಬೇಕು' ಎಂದು. ಕೇವಲ ಶ್ರೀಹಟ್ಟಾ ಜಿಲ್ಲೆಯಿಂದಲ್ಲ , ಶಿಲ್ಲಾಂಗ್, ಢಾಕಾ, ನಾರಾಯಣಗಂಜ್, ಮೈಮನ್‌ಸಿಂಗ್, ಬರಿಶಾಲ್, ದಿನಾಜ್‌ಪುರ್ ಮುಂತಾದ ಸ್ಥಳಗಳಿಂದಲೂ ಸಹ. ಯುದ್ಧದ ಭೀಷಣತೆ ದಿಕ್ಕುದಿಕ್ಕಿಗೂ ಹರಡಿದೆ, ದುರ್ಭಿಕ್ಷದ ಛಾಯೆಯು ಇನ್ನೂ ಇದೆ, ರಾಜತಂತ್ರದ ಅನಿಶ್ಚಿತತೆಯು ಎಲ್ಲರ ಮನವನ್ನು ಕಲಕಿದೆ, ಅಲ್ಲದೆ ಕೋಮು ಸಂಘರ್ಷವು ನಿತ್ಯಜೀವನದಲ್ಲಿ ಶಂಕೆ, ವೇದನೆಯನ್ನು ತಂದೊಡ್ಡಿದೆ. ಬೆಳಕೆಲ್ಲಿ? ಆಶಾಕಿರಣವೆಲ್ಲಿ? ಸಾಂತ್ವನವೆಲ್ಲಿ?

ಬಾ ಅಪ್ಪಾ ರಾಮಕೃಷ್ಣ ಬಾ. ನಿನ್ನ ಮಾಯಾತೀತ ಅಕ್ಷೋಭ್ಯ ಪ್ರಶಾಂತಿಯ ಉತ್ತುಂಗದಿಂದ ಕೆಳಗಿಳಿದು ನಮ್ಮ ಈ ಸಹಸ್ರ ಸಂಘರ್ಷಯುತ ಮಾಯಾಸಂಸಾರದ ದುಃಖ-ದೈನ್ಯ-ಭಯ-ಸಂಶಯ-ಕ್ಷೋಭೆಯ ನಡುವೆ ಬಾ. ನೀನು ಭಗವಂತನೇ ಎಂಬುದಕ್ಕೆ ಪ್ರಮಾಣ ಹುಡುಕಿಕೊಂಡು ವೈಕುಂಠಕ್ಕೆ ಓಡುವುದಕ್ಕಾಗಲಿ, ಧ್ಯಾನ ಸ್ತಬ್ಧತೆಯ ಸೀಮೆಯನ್ನು ತಲುಪುವುದಕ್ಕಾಗಲಿ ನಮಗೆ ಸಾಧ್ಯವಿಲ್ಲ. ಆದ್ದರಿಂದ ನೀನು ಈಗಲೇ ನಾವೆಲ್ಲಿರುವೆವೋ ಅಲ್ಲಿಗೇ ಬಾ. ನಮ್ಮ ಹೃದಯದಲ್ಲಿ ನೆಲಸಿ, ನಮ್ಮನ್ನೆತ್ತಿಹಿಡಿ, ಶಕ್ತಿ-ಸಾಮಂಜಸ್ಯಗಳನ್ನಿತ್ತು ನಿಲ್ಲಿಸು. ನಾವಾಗ, ನೀನೇ ನಮ್ಮೆಲ್ಲರನ್ನೂ ನಡೆಸುವ ಧ್ರುವತಾರೆ ಭಗವಂತ ಎಂಬುದನ್ನು ನಿಸ್ಸಂದೇಹವಾಗಿ ತಿಳಿಯುತ್ತೇವೆ.

ಶ್ರೀರಾಮಕೃಷ್ಣರ ಅಶರೀರ ವಾಣಿಯು ವಿರಜಾನಂದರ ಹೃದಯದಲ್ಲಿ ಪ್ರತಿಧ್ವನಿಸಿತ್ತು—''ನಡೆ, ನಡೆ, ಸೈನಿಕನೇ, ನನ್ನ ಪತಾಕೆಯನ್ನು ಹೊತ್ತು ನಡೆ. ನನ್ನ ಬೆಳಕನ್ನು ಹರಡಿ, ನನ್ನ ನಿಶಾನೆಯನ್ನು ಹಾರಿಸಿ, ಪರಮ ಧನ್ಯತೆಯನ್ನು ಹೊಂದುವ ಸುವರ್ಣ ಅವಕಾಶವನ್ನು ಕಳೆದುಕೊಳ್ಳಬೇಡ. ನನಗಾಗಿ, ನನ್ನ ಕೆಲಸಕ್ಕಾಗಿ, ಯಾರು ಮರಣವನ್ನಪ್ಪಲು ಮುಂದಾಗುತ್ತಾರೋ, ಅವರೇ ಯಥಾರ್ಥವಾಗಿ ಬದುಕುವರು! ಈಗ ವಿರಜಾನಂದರು ಉತ್ತರ ಬಂಗಾಳ, ಅಸ್ಸಾಂ ಮತ್ತು ಪೂರ್ವಬಂಗಾಳಕ್ಕೆ ಹೊರಡುವುದೆಂದು ನಿಶ್ಚಯಿಸಿಬಿಟ್ಟರು. ಪ್ರಯಾಣಸೂಚಿಯೂ ತಯಾರಾಯಿತು. ಲಕ್ನೌದಲ್ಲಿಳಿದು ಚಿಕ್ಕ ಲೈನಿನ ರೈಲನ್ನು ಹಿಡಿದು ಮೊದಲು ಕಾಟಿಹಾರ್‌ಗೆ ಹೋಗುವುದು, ಅಲ್ಲಿಂದ ದಿನಾಜ್‌ಪುರ್ ತದನಂತರ ಗೌಹಾಟಿ, ಶಿಲ್ಲಾಂಗ್, ಸಿಲ್ಹೆಟ್ ನಂತರ ಢಾಕಾ ಮತ್ತು ನಾರಾಯಣಗಂಜ್‌ಗೆ. ಯುದ್ಧದ ಪರಿಸ್ಥಿತಿಯಿಂದಾಗಿ ರೈಲಿನಲ್ಲಿ ಓಡಾಡುವುದು ಅತ್ಯಂತ ಕಷ್ಟಕರವಾದ್ದರಿಂದ ಎಲ್ಲ ಕಡೆಯ ಆಮಂತ್ರಣವನ್ನೂ ಸ್ವೀಕರಿಸಲಾಗಲಿಲ್ಲ. ಮೇಲೆ ಹೇಳಿದ ಸ್ಥಾನಗಳಲ್ಲಿದ್ದ ಆಶ್ರಮಗಳನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಮುತ್ತಲಿನ ಜಾಗಗಳ ಭಕ್ತರು ಮಠಾಧ್ಯಕ್ಷರ ಉಪಸ್ಥಿತಿಯನ್ನು ಉಪಯೋಗಿಸಿಕೊಳ್ಳಬಹುದಾಗಿತ್ತು.

ನವೆಂಬರ್‌ನಲ್ಲಿ (೧೯೪೪) ಶ್ಯಾಮಲಾತಾಲ್‌ನಿಂದ ಹೊರಟ ಮಹಾರಾಜರಿಗೆ ಇಡೀ ಪ್ರಯಾಣವನ್ನು ಮುಗಿಸಲು ಎರಡು ತಿಂಗಳೇ ಹಿಡಿಯಿತು. ಸಿಲ್ಹೆಟ್ ಮತ್ತು ಢಾಕಾದಲ್ಲಿ ಒಂದೊಂದು ವಾರವಿದ್ದರು. ಬೇರೆ ಸ್ಥಾನಗಳಲ್ಲಿ ಇನ್ನೂ ಕಡಿಮೆ ದಿನಗಳಿದ್ದರು. ಪ್ರತಿಯೊಂದು ಆಶ್ರಮದಲ್ಲೂ ಮಹಾರಾಜರ ಆಗಮನವು ಉತ್ಸಾಹದ ಚಿಲುಮೆಯನ್ನು ಚಿಮ್ಮಿಸಿತ್ತು. ಅಕ್ಕಪಕ್ಕದ ಜಿಲ್ಲೆಗಳಿಂದ ಸಾಧುಗಳು ಮತ್ತು ಭಕ್ತರು ಬರುತ್ತಿದ್ದರು. ಅಲ್ಲದೆ ಪೂಜೆ-ಪಾಠ-ಭಜನೆ-ಸತ್ಸಂಗಗಳಿಂದ ಆಶ್ರಮಗಳಲ್ಲಿ ಸದಾ ಶುದ್ಧ ಆನಂದಮಯ ಪರಿಸರವು ಏರ್ಪಡುತ್ತಿತ್ತು. ಮಹಾರಾಜರು ದಿನವೂ ಬೆಳಗ್ಗೆ ವ್ಯಾಕುಲವುಳ್ಳ ಭಕ್ತರಿಗೆ ಸಾಧನೋಪದೇಶವನ್ನು ನೀಡಿ, ಸಂಜೆ ಎಲ್ಲರಿಗೂ ದರ್ಶನ ನೀಡಲು ಹೊರಗೆ ಕುಳಿತುಕೊಳ್ಳುತ್ತಿದ್ದರು. ಅಗತ್ಯವಿದ್ದಲ್ಲಿ ರಾತ್ರಿ ಪ್ರತ್ಯೇಕವಾಗಿ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು.

ಶ್ರೀಮಾತೆಯವರ ಜನ್ಮದಿನವು ದಿನಾಜ್‌ಪುರದಲ್ಲಿಯೇ ಕಳೆಯಿತು. ಅಲ್ಲಿರುವಾಗ ಒಂದು ದಿನ ನಗರದಿಂದ ಕೆಲವು ಮೈಲಿ ದೂರವಿರುವ ಕಾಂತಜೀಯ ದರ್ಶನ ಮಾಡಿದರು. ಗೌಹಾಟಿಯಿಂದ ಒಂದು ದಿನ ಕಾಮಾಖ್ಯ ಮಾತೆಯ ದರ್ಶನ ಮಾಡಿ ಬಂದರು. ಶಿಲ್ಲಾಂಗಿನಿಂದ ಚಿರಾಪುಂಜಿಗೆ ಹೋಗಲು ತುಂಬ ಮನಸ್ಸಿತ್ತು. ಆದರೆ ನೆಗಡಿ ಜ್ವರದಿಂದಾಗಿ ಹೋಗಲಾಗಲಿಲ್ಲ.

ಅವರ ಈ ಪ್ರಯಾಣಕ್ಕೆ ಮುಖ್ಯ ಕಾರಣ ಶ್ರೀಹಟ್ಟಾದ ಆಶ್ರಮ. ಅಲ್ಲಿನ ಅಧ್ಯಕ್ಷರಾದ ಸ್ವಾಮಿ ಸೌಮ್ಯಾನಂದರು ಭಕ್ತರೊಬ್ಬರನ್ನು ಕರೆದುಕೊಂಡು ಮಹಾರಾಜರನ್ನು ಕರೆತರಲು ಶ್ಯಾಮಲಾತಾಲ್‌ಗೆ ಹೋಗಿದ್ದರು. ಅಲ್ಲದೆ ಇಡೀ ಪ್ರಯಾಣ ಅವರೊಂದಿಗಿದ್ದರು. ಶ್ರೀಹಟ್ಟಾ ಆಶ್ರಮದ ಸಾತ್ತ್ವಿಕ ಪರಿಸರದಿಂದ ವಿರಜಾನಂದರು ಪ್ರಭಾವಿತರಾದರು. ಪ್ರಾಂಗಣದ ಮಧ್ಯದಲ್ಲಿ ನಾಲ್ಕು ಕಡೆಯೂ ಅಗಲವಾದ ಜಗಲಿಯನ್ನು ಹೊಂದಿ, ಸ್ವಚ್ಛವಾಗಿಯೂ, ಸುಂದರವಾಗಿಯೂ ಇದ್ದ ಪರ್ಣಕುಟೀರವೇ ಅಲ್ಲಿಯ ದೇವರಮನೆ. ಅದನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲೂ ಗ್ರಂಥಾಲಯ, ಉಚಿತ ಔಷಧಾಲಯ, ವಿದ್ಯಾಲಯ, ಕಾರ್ಯಕರ್ತರ ವಾಸಗೃಹ ಮುಂತಾದವು ಇದ್ದವು. ಈ ಆಶ್ರಮದ ಬಹುಮುಖ ಕಾರ್ಯಕಲಾಪಗಳು ಒಂದೇ ದಿನದಲ್ಲಿ ಮೈತಾಳಿದ್ದಲ್ಲ; ಒಬ್ಬ ವ್ಯಕ್ತಿಯ ಅಸಾಧಾರಣ

ಚಾರಿತ್ರ್ಯಬಲ, ವಿಶ್ವಾಸ, ಭಕ್ತಿ, ಹೃದಯವಂತಿಕೆ ಮತ್ತು ಅತಂದ್ರಿತ ಸೇವಾನಿಷ್ಠೆಯು ಈ ಆಶ್ರಮದ ಅಡಿಗಲ್ಲು. ಅವರ ಹೆಸರೇ ಇಂದ್ರದಯಾಲ್ ಭಟ್ಟಾಚಾರ್ಯ. ಇವರು ಶಾಲೆಯಲ್ಲಿ ಶಿಕ್ಷಕರಾಗಿದ್ದು, ಬಾಲಕರನ್ನು ಆಯ್ಕೆ ಮಾಡಿ, ಅವರಿಗೆ ತಾಯ ಸ್ನೇಹವನ್ನೆರೆದು, ಅವರಲ್ಲಿ ಶ್ರೀರಾಮಕೃಷ್ಣ ವಿವೇಕಾನಂದರ ಆದರ್ಶದ ಕಾವನ್ನೇರಿಸುತ್ತಿದ್ದರು. ಕ್ರಮವಾಗಿ ಅನೇಕ ಯುವಕರು ತ್ಯಾಗ ಮತ್ತು ಸೇವೆಯ ಆದರ್ಶವನ್ನು ಸ್ವೀಕರಿಸಿದರು. ಕೇವಲ ಶ್ರೀಹಟ್ಟಾದಲ್ಲಲ್ಲದೆ ಜಿಲ್ಲೆಯ ಬಹುಭಾಗಗಳಲ್ಲಿ ಆಶ್ರಮದ ಭಾವಧಾರೆಯು ಹರಿಯತೊಡಗಿತು. ಬಹಳಷ್ಟು ಯುವಕರು ವಿಧಿವತ್ತಾದ ಸಂನ್ಯಾಸವನ್ನು ಪಡೆದರು. ಆದರೆ ಇಂದ್ರದಯಾಲರು ಮಾತ್ರ ಇಂದ್ರದಯಾಲ ಭಟ್ಟಾಚಾರ್ಯರಾಗಿಯೇ ಉಳಿದುಬಿಟ್ಟರು. ಅವರದ್ದು ಸಂನ್ಯಾಸಿಗಳನ್ನು ರೂಪುಗೊಳಿಸುವ ಕೆಲಸ, ವಿರಾಮವೆಲ್ಲಿಂದ? ರಂಗಮಂಟಪದಲ್ಲಿ ನಾಟಕವನ್ನಾಡಿದವರು ವಿದಾಯ ತೆಗೆದುಕೊಳ್ಳುತ್ತಾರೆ, ವೀಕ್ಷಕರೂ ಮನೆಗಳಿಗೆ ಹಿಂದಿರುಗುತ್ತಾರೆ. ಆದರೆ ರಂಗದಲ್ಲಿ ಬೆಳಗುವ ದೀಪವನ್ನು ತಕ್ಷಣವೇ ಆರಿಸಿಬಿಟ್ಟರೆ ನಡೆಯದು.

ಕೊನೆಗೂ ೧೯೨೬ರಲ್ಲಿ ಅವರಿಗೆ ವಿರಾಮವು ದೊರೆಯಿತು. ಶ್ರೀಹಟ್ಟಾದ ಕೆಲಸವು ಸುವ್ಯವಸ್ಥಿತವಾಗಿ ನಡೆಯುತ್ತಲಿದೆ, ಶ್ರೀರಾಮಕೃಷ್ಣ ಮಠ ಹಾಗೂ ಮಿಷನ್ ಅದರ ಎಲ್ಲ ಜವಾಬ್ದಾರಿಯನ್ನು ಹೊತ್ತಿದೆ. ಆ ಬಾರಿಯ ಶ್ರೀರಾಮಕೃಷ್ಣ ಮಠ ಹಾಗೂ ಮಿಷನ್ನಿನ ಮಹಾಸಮ್ಮೇಳನಕ್ಕಾಗಿ ಇಂದ್ರದಯಾಲರು ಬೇಲೂರು ಮಠಕ್ಕೆ ಬಂದರು. ಆಗ ಮಠಾಧ್ಯಕ್ಷರಾದ ಪೂಜ್ಯ ಮಹಾಪುರುಷ ಮಹಾರಾಜರು ಅವರಿಗೆ ಸಂನ್ಯಾಸವನ್ನು ನೀಡಿದರು; ಹೆಸರಾಯಿತು 'ಸ್ವಾಮಿ ಪ್ರೇಮೇಶಾನಂದ.' ಬಹಳ ವರ್ಷಗಳ ಹಿಂದೆ ಶ್ರೀಮಾತೆಯವರಿಂದ ಮಂತ್ರದೀಕ್ಷೆಯನ್ನು ಇವರು ಪಡೆದಿದ್ದರು. ಸಂನ್ಯಾಸಿಗಳಾದ ನಂತರ ಕಾಶೀ, ಹೃಷೀಕೇಶ ಮುಂತಾದೆಡೆ ತಪಸ್ಯೆಯಲ್ಲಿ ನಿರತರಾಗಿದ್ದು, ನಂತರ ಹಿರಿಯರ ಆದೇಶದ ಮೇರೆಗೆ ಮೊದಲು ಢಾಕಾದಲ್ಲಿ ನಂತರ, ಪೂಜ್ಯ ಅಖಂಡಾನಂದರ ದೇಹತ್ಯಾಗವಾದ ಮೇಲೆ ಸಾರಗಾಛಿಯಲ್ಲಿ ಕೇಂದ್ರದ ಜವಾಬ್ದಾರಿಯನ್ನು ದೀರ್ಘಕಾಲ ವಹಿಸಿದ್ದರು. ಇಂದ್ರದಯಾಲರು ಶ್ರೀಹಟ್ಟಾವನ್ನು ಬಿಟ್ಟು ಬಂದವರು, ಸಂನ್ಯಾಸವಾದ ಮೇಲೆ ಮತ್ತಲ್ಲಿಗೆ ಹಿಂದಿರುಗಲಿಲ್ಲ. ಆದರೆ ಶ್ರೀಹಟ್ಟಾವಾಸಿಗಳು ಅವರನ್ನು ಮರೆತಿರಲಿಲ್ಲ, ಮರೆಯಲು ಸಾಧ್ಯವೂ ಇರಲಿಲ್ಲ. ೧

ವಿರಜಾನಂದರು ಬರುವರೆಂದು ಶ್ರೀಹಟ್ಟಾ ಆಶ್ರಮವಾಸಿಗಳು ಒಂದು ತಿಂಗಳಿಂದ ಹಗಲೂ ರಾತ್ರಿ ಪರಿಶ್ರಮಪಟ್ಟು ಅವರಿಗಾಗಿ ಎರಡು ಕೊಠಡಿಗಳುಳ್ಳ ಆರಾಮದಾಯಕವಾದ ಒಂದು ಹೊಸ ಕಟ್ಟಡವನ್ನೇ ನಿರ್ಮಿಸಿಬಿಟ್ಟಿದ್ದರು. ಮಹಾರಾಜರು ಇಲ್ಲಿದ್ದ ಹದಿನೈದು ದಿನಗಳೂ ಸಹ ದುರ್ಗೋತ್ಸವವೋ ಎಂಬಂತೆ ಸಡಗರಿಸಿತು; ಅಲ್ಲಿಂದ ಹೊರಟ ದಿನ 'ವಿಜಯಾ'ದ (ವಿಜಯದಶಮಿಯ) ಅಗಲುವಿಕೆಯ ನೈರಾಶ್ಯಭಾವವು ಅಲ್ಲಿ ನೆರೆದವರೆಲ್ಲರ ಹೃದಯದಲ್ಲಿ ಮಿಡಿಯತೊಡಗಿತು. ಮಹಾರಾಜರನ್ನು ಹೊತ್ತ ಗಾಡಿಯು ಕರೀಂಗಂಜಿನ ದಾರಿಯಲ್ಲಿ ಅದೃಶ್ಯವಾದಾಗ ನೆರೆದವರೆಲ್ಲ 'ಜಯ ರಾಮಕೃಷ್ಣ' ಎಂದು ಧ್ವನಿಸಿ ಆರ್ದ್ರರಾಗಿ ಪರಸ್ಪರರನ್ನು ಆಲಂಗಿಸಿಕೊಂಡಿದ್ದರು.

ಕರೀಂಗಂಜಿನ ರೋಗಗ್ರಸ್ತ ಮಹಿಳೆಯೊಬ್ಬಳು ವಿರಜಾನಂದರಿಂದ ಮಂತ್ರದೀಕ್ಷೆಯನ್ನು ಪಡೆಯಬೇಕೆಂಬ ಆಸೆಯನ್ನು ಬಹಳ ದಿನಗಳಿಂದ ಪೋಷಿಸಿಕೊಂಡು ಬಂದಿದ್ದಳು. ದುಃಖದ ವಿಷಯವೆಂದರೆ, ಮಹಾರಾಜರು ಶ್ರೀಹಟ್ಟಾಕ್ಕೆ ಬರುವಷ್ಟರಲ್ಲಿ ಈಕೆಯು ತುಂಬ ಅಸ್ವಸ್ಥಳಾದಳು. ಏಳಲೂ ಸಹ ಅಶಕ್ತಳಾಗಿದ್ದ ಇವಳ ಜೀವದಾಸೆಯನ್ನು ವೈದ್ಯರು ಕೈಬಿಟ್ಟಿದ್ದರೆಂದೇ ಹೇಳಬಹುದು. ಆದರೂ ಈಕೆಗೆ ಉಳಿದ ಏಕೈಕ ಆಕಾಂಕ್ಷೆ ಸಾಯುವ ಮೊದಲು ಸದ್ಗುರುವಿನಿಂದ ಸಿದ್ಧಮಂತ್ರದ ಪ್ರಾಪ್ತಿ. ಈಕೆಯ ಪತಿಯು ಕೆಲವು ವರ್ಷಗಳ ಹಿಂದೆ ವಿರಜಾನಂದರಿಂದಲೇ ದೀಕ್ಷೆಯನ್ನು ಪಡೆದಿದ್ದರು. ಅವರೀಗ ಶ್ರೀಹಟ್ಟಾ ಆಶ್ರಮಕ್ಕೆ ಬಂದು ಕಂಬನಿದುಂಬಿ ಗುರುವಿನಲ್ಲಿ ತನ್ನ ಪತ್ನಿಯ ಅಂತಿಮೇಚ್ಛೆಯನ್ನು ಅರಿಕೆಮಾಡಿಕೊಂಡರು. ಅದಕ್ಕೆ ವಿರಜಾನಂದರು 'ಬರುವೆ, ಅವಳಿಗೋಸ್ಕರವಾಗಿಯೇ ನಾನು ಕರೀಂಗಂಜಿಗೆ ಬರುವೆ' ಎಂದು ಆಶ್ವಾಸನೆಯಿತ್ತರು.

ಶ್ರೀಹಟ್ಟಾದಿಂದ ಬೀಳ್ಕೊಂಡ ವಿರಜಾನಂದರು ಮರಣಶಯ್ಯೆಯಲ್ಲಿದ್ದ ಆಕೆಯ ಬಳಿಗೇ ಬಂದರು. ಕೇವಲ ಅಸ್ಥಿಪಂಜರವೇ ಆಗಿದ್ದ ಅವಳ ಶರೀರವು ಹಾಸಿಗೆಯೊಂದಿಗೆ ಒಂದಾಗಿ ಹೋಗಿದೆ. ಆದರೆ ಆಕೆಯ ಕಣ್ಣುಗಳಲ್ಲಿ ಉತ್ಕಟ ಆಧ್ಯಾತ್ಮಿಕ ತೃಷ್ಣೆ ಜ್ವಲಂತವಾಗಿದೆ. ಭಗವಂತನ ಅಪಾರವಾದ ಕಾರುಣ್ಯವು ಶ್ರೀಗುರುವಿನ ಮೂಲಕ ಪ್ರಕಟಗೊಂಡಿದೆ. ಮಹಿಳೆಯು ಅಳುತ್ತಿದ್ದಾಳೆ; ಈ ಜೀವನದ ರಿಕ್ತತೆಯಿಂದಲ್ಲ, ಪಾರಮಾರ್ಥಿಕ ಪರಮಾನಂದದ ಪ್ರಾಪ್ತಿಗಾಗಿ. ಮಹಾರಾಜರು ಆಕೆಯ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು, ದೀಕ್ಷೆಯಿತ್ತರು. ರೋಗಶಯ್ಯೆಯಲ್ಲಿದ್ದ ಆಕೆಯು ಗುರುವಿನೊಡನೆ ಮೂರು ಬಾರಿ ಮಂತ್ರವನ್ನುಚ್ಚರಿಸಿದಳು. ನಾಲಿಗೆಯಲ್ಲಿ ಒಂದಿಷ್ಟೂ ಜಡತೆಯೆಂಬುದಿಲ್ಲ, ಸ್ಪಷ್ಟತೆಯಿತ್ತು. ಶೀರ್ಣವಾದ ಮುಖದಲ್ಲೀಗ ಧನ್ಯತೆಯು ಹೊಮ್ಮಿದೆ. ಈಕೆಯು ಇದಾದ ಕೆಲವು

---

೧ ಇಂದ್ರದಯಾಲರು ಶ್ರೀರಾಮಕೃಷ್ಣರ ಬಗ್ಗೆ ಹಲವಾರು ಉತ್ಕೃಷ್ಟ ಹಾಡುಗಳನ್ನು ರಚಿಸಿದ್ದಾರೆ. ಬ್ರಹ್ಮಾನಂದ ಮಹಾರಾಜರು ಇವರ ಹಾಡನ್ನು ಕೇಳಿ ತುಂಬ ಪ್ರಭಾವಿತರಾಗುತ್ತಿದ್ದರು. ಪೂಜ್ಯ ಮಹಾಪುರುಷ ಮಹಾರಾಜರು ಒಮ್ಮೆ ಪ್ರೇಮೇಶಾನಂದರಿಗೆ ''ನಿನ್ನ ಆ ಒಂದು ಹಾಡಿನಿಂದಾಗಿ ನೀನು ಅಮರನಾಗುವೆ'' ಎಂದಿದ್ದರು. ಆ ಹಾಡಿನ ಮೊದಲೆರಡು ಸಾಲು ಹೀಗಿದೆ **'ಅರೂಪ ಸಾಯರೇ ಲೀಲಾಲಹರೀ ಉಠಿಲೋ ಮೃದುಲ ಕರುಣಾ ಬಾಯ್ । ಆದಿಅಂತಹೀನ್ ಅಖಂಡೇ ವಿಲೀನ್ ಮಾಯಾಯ್ ಧರಿಲೇ ಮಾನವ ಕಾಯ್...'** *('ಅರೂಪ ಸಾಗರದಿ ಬೀಸಿ ಕರುಣೆಯ ಗಾಳಿ, ಎದ್ದಿತು ಲೀಲಾಲಹರಿ । ಆದಿ ಅಂತ ಹೀನ, ಅಖಂಡದಲಿ ವಿಲೀನ; ಮಾಯೆಯಿಂದ ಧರಿಸಿದೆ ಮಾನವ ಕಾಯ.')*

ದಿನಗಳು ಮಾತ್ರ ಬದುಕಿದ್ದಳು. ವಿರಜಾನಂದರು ಢಾಕಾದಲ್ಲಿದ್ದಾಗ ಟೆಲಿಗ್ರಾಂ ಮೂಲಕ ಈಕೆಯ ಮರಣವಾರ್ತೆಯು ತಲುಪಿತು. ಮಹಾರಾಜರು ಕೆಲವು ಕ್ಷಣ ಮೌನವಾಗಿದ್ದು ನಂತರ 'ಜಯ್ ಪ್ರಭು' ಎಂದಷ್ಟೆ ಉದ್ಗರಿಸಿದ್ದರು.

ಕರೀಂಗಂಜಿನಿಂದ ಹೊರಟು ಸಂಜೆಗೆ ಅಖಾವುಡಾ ಜಂಕ್ಷನ್ನಿನ ರೈಲನ್ನು ಹತ್ತಿ ಅಲ್ಲಿಂದ ಢಾಕಾದ ರೈಲನ್ನು ಹಿಡಿಯುವುದಿತ್ತು. ಎರಡನೇ ದರ್ಜೆಯ ಬೋಗಿಯೊಂದರಲ್ಲಿ ಮಹಾರಾಜರೂ ಮತ್ತವರ ಜೊತೆಯ ಸಾಧುಗಳೂ ಪ್ರಯಾಣಿಸುತ್ತಿದ್ದರು; ಶ್ರೀಹಟ್ಟಾದ ಭಕ್ತ, ಪೋಲೀಸ್ ಆಫೀಸರ್ ಸಹ ಸ್ವಲ್ಪ ದೂರ ಬಿಟ್ಟುಬರಲೆಂದು ಜೊತೆಯಲ್ಲಿ ಹೊರಟಿದ್ದರು. ಆತನು ಧೂಮ ಪಾನ ಮಾಡುವವನೆಂಬುದು ಮಹಾರಾಜರಿಗೆ ತಿಳಿದಿತ್ತು. ಒಂದು ಸಿಗರೇಟನ್ನು ತೆಗೆದು ಅವನೆಡೆಗೆ ಚಾಚಿ 'ತೊಗೋ ಸೇದು' ಎನ್ನುತ್ತಿದ್ದಾರೆ. ಆತ ಚಕಿತನಾದ. ಆತನು ಮಹಾರಾಜರಿಂದ ದೀಕ್ಷೆ ಪಡೆದವ; ನಾಚಿ ಎರಡೂ ಕೈಗಳಿಂದ ಮುಖ ಮುಚ್ಚಿಕೊಳ್ಳುತ್ತಿದ್ದಾನೆ.

''ಅದರಲ್ಲೇನು? ತಗೋ ತಗೋ.''

ಆ ಆಫೀಸರ್ ತೆಗೆದುಕೊಳ್ಳುವುದಿರಲಿ, ಮಿಸುಕಾಡುತ್ತಲೂ ಇಲ್ಲ.

''ಅರೇ ತೆಗೆದುಕೋ! ಒಂದು ಸೇದುವ ವಸ್ತುವನ್ನು ಸೇದಲು ನಾಚಿಕೆಯೇಕೆ? ಹೋಗಲಿ ಆ ಕಡೆ ಮುಖ ತಿರುಗಿಸಿಕೊಂಡು ಸೇದು, ಶೀತದ ರಾತ್ರಿ, ತೆಗೆದುಕೋ.''

ಸರಿ, ಆತನ ಹಿಂಜರಿಕೆ ಕಳೆಯಿತು. ಕಿಡಕಿಯ ಹೊರಗೆ ಮುಖವನ್ನು ಚಾಚಿ ಸಿಗರೇಟನ್ನು ಹೊತ್ತಿಸಿದ. ಮಹಾರಾಜರು ನಗುತ್ತಿದ್ದಾರೆ; ಮಿಕ್ಕ ಸಾಧುಗಳೂ ಸಹ. ಆ ಜಿಲ್ಲೆಯ ಜಬರದಸ್ತು ಪೋಲೀಸ್ ಆಫೀಸರನ ತಲೆ ಕಿಟಿಕಿಯ ಹೊರಗೆ ಚಾಚಿದೆ. ರಾತ್ರಿ ಕತ್ತಲಲ್ಲಿ ಧೂಮವು ಎಲ್ಲೋ ಬೆರೆತು ಹೋಗುತ್ತಿದೆ. ಹೃದಯದಲ್ಲಿ ಅವ್ಯಕ್ತವಾದ ಅಳು ಶೇಖರವಾಗುತ್ತಲಿದೆ.

ಢಾಕಾದಲ್ಲಿಯ ಹದಿನಾರು ದಿನಗಳೂ ಸಹ ಶ್ರೀಹಟ್ಟಾದ ಹದಿನೈದು ದಿನಗಳ ಪುನರಾವೃತ್ತಿಯಂತಿತ್ತು. ಇಲ್ಲಿ ಢಾಕಾ ಮತ್ತು ಅಕ್ಕಪಕ್ಕದ ಜಿಲ್ಲೆಗಳ ಬಹು ಜನ ಭಕ್ತರು ಪೂರ್ವ ಬಂಗಾಳದ ವಿಭಿನ್ನ ಆಶ್ರಮಗಳ ಸಾಧುಗಳು ಸಮಾಗಮಗೊಂಡು ಸಂಘ ಗುರುವಿನ ಉಪಸ್ಥಿತಿಯಿಂದುಂಟಾದ ಆಧ್ಯಾತ್ಮಿಕ ಸನ್ನಿವೇಶದ ಲಾಭವನ್ನು ಪಡೆದರು. ಶ್ರೀಹಟ್ಟಾದಲ್ಲಿ ಬಹು ಮಂದಿ ಖಾಸಿಯಾ ಬುಡಕಟ್ಟಿನವರು ದೀಕ್ಷೆಯನ್ನು ಪಡೆದಿದ್ದರು, ಇಲ್ಲಿಯೂ ಸಹ ಒಂದು ದೊಡ್ಡ ದಳವೇ ಬಂದಿತ್ತು. ಅವರ ದೀಕ್ಷೆಗೆಂದು ಬೇರೊಂದು ದಿನವನ್ನೇ ನಿಗದಿಪಡಿಸಲಾಯಿತು. ವಿರಜಾನಂದರು ದುಭಾಷಿ ಭಕ್ತನೊಬ್ಬನ ಸಹಾಯದಿಂದ, ಶ್ರೀರಾಮಕೃಷ್ಣರ ಭಾವ ಧಾರೆಯಿಂದ ಪ್ರಭಾವಿತರಾದ, ಪರ್ವತ ಪ್ರದೇಶಗಳ ಈ ಸರಳ ಜೀವಿಗಳಿಗೆ ಮೂರು ಗಂಟೆಗಳ ಕಾಲ ಕುಳಿತು ದೀಕ್ಷೆಯನ್ನಿತ್ತರು. ಮತ್ತೊಂದು ದಿನ ಸ್ವಾಮಿ ಪರಮಾನಂದರಿಂದ ಸ್ಥಾಪಿತವಾಗಿದ್ದ ಆನಂದ ಆಶ್ರಮವನ್ನು ನೋಡಲು ಹೋಗಿದ್ದರು. ಆಶ್ರಮದ ಕಾರ್ಯದರ್ಶಿನಿಯಾದ ಭಗಿನಿ ಚಾರುಶೀಲಾದೇವಿಯವರು ತಮ್ಮ ದುರ್ಬಲ ಸ್ವಾಸ್ಥ್ಯವನ್ನಿಟ್ಟುಕೊಂಡೂ ಸಹ ಅಷ್ಟು ದೊಡ್ಡ ಪ್ರತಿಷ್ಠಾನವನ್ನು ಅದ್ಭುತ ವಾದ ಸ್ಥೈರ್ಯ, ಸತತ ಪ್ರಯತ್ನ ಹಾಗೂ ನಿಷ್ಠೆಯಿಂದ ರೂಪುಗೊಳಿಸುತ್ತಿರುವುದನ್ನು ಕಂಡು ಮಹಾರಾಜರು ತುಂಬ ಸಂತುಷ್ಟರಾದರು. ಆಶ್ರಮದ ಅನೇಕ ಬಾಲಕಿಯರು ಮಹಾರಾಜರಿಂದ ದೀಕ್ಷೆಯನ್ನು ಪಡೆದರು.

ನಮ್ಮ ದೇಶದ ಆದರ್ಶ ಸ್ತ್ರೀ ಶಿಕ್ಷಣದ ಬಗ್ಗೆ ವಿರಜಾನಂದರು ಯಾವಾಗಲೂ ಕಳಕಳಿ ಹೊಂದಿದ್ದರು. ಅವರಿಂದ ದೀಕ್ಷೆಯನ್ನು ಪಡೆದ ಹುಡುಗಿಯರಲ್ಲಿ ಯಾರು ಯಾರು ಕಾಲೇಜಿನ ಶಿಕ್ಷಣ ವನ್ನು ಪಡೆದಿದ್ದರೋ ಅವರಿಗೆಲ್ಲ ಮಹಾರಾಜರು ಈ ಮಹತ್ವಪೂರ್ಣ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹ ಕೊಡುತ್ತಿದ್ದರು. ಕೊಲ್ಕತ್ತೆಯ ನಿವೇದಿತಾ ವಿದ್ಯಾಲಯಕ್ಕಾಗಿ ಒಮ್ಮೆ ಕೆಲವು ಶಿಕ್ಷಕಿಯರ ಅಗತ್ಯ ಬಿತ್ತು. ಈ ಹಿಂದೆಯೇ ಗ್ರಾಜುಯೇಟ್ ಆಗಿದ್ದ ಕೆಲವು ಕುಮಾರಿಯರು ತಮಗೆ ಸಮಾಜಸೇವೆ ಮಾಡುವ ಸದವಕಾಶವನ್ನು ಕೊಡುವಂತೆ ಮಹಾರಾಜರನ್ನು ಕೆಲವೊಮ್ಮೆ ಬೇಡಿಕೊಂಡಿದ್ದರು. ಹೀಗಾಗಿ ಮಹಾರಾಜರು ಅವರನ್ನೆಲ್ಲ ವಿದ್ಯಾಲಯದ ಕೆಲಸಕ್ಕಾಗಿ ಆಹ್ವಾನಿಸಿದರು. ದುಃಖದ ವಿಷಯವೆಂದರೆ ಈ ಕೆಲಸಕ್ಕೆ ಒಬ್ಬರಾದರೂ ಬರಲಿಲ್ಲ. ಎಲ್ಲರೂ ಒಂದೊಂದು ನೆಪವೊಡ್ಡಿ ನುಣುಚಿಕೊಂಡರು. ಇದರಿಂದಾಗಿ ವಿರಜಾನಂದರು ''ಹುಡುಗಿಯರು ತುಂಬ ಚಂಚಲೆಯರು; ಧೈರ್ಯ ಕಡಿಮೆ. ಯಾವಾಗಲೂ ಅವರಿಗೆ ಒಂದು ಅವಲಂಬನೆ ಬೇಕು. ಈ ಕಾರಣಕ್ಕಾಗಿಯೇ ವಿವೇಕಾನಂದರು 'ಸ್ತ್ರೀಯರು ವೇದಾಂತವನ್ನು ಅರಿಯುವುದು ಕಷ್ಟ' ಎನ್ನುತ್ತಿದ್ದರು'' ಎಂದು ಮನನೊಂದು ಹೇಳಿದ್ದರು.

*(ಮುಂದುವರಿಯುವುದು)*

''ಪ್ರತಿಯೊಬ್ಬ ಹೆಂಗಸೂ ಶಕ್ತಿಯ ಒಂದೊಂದು ರೂಪ. ಆ ಆದ್ಯಾಶಕ್ತಿಯೇ ಹೆಂಗಸಾಗಿ ಹೆಂಗಸಿನ ರೂಪ ಧರಿಸಿದ್ದಾಳೆ. ಅಧ್ಯಾತ್ಮರಾಮಾಯಣದಲ್ಲಿ ಹೇಳಿದೆ, ನಾರದಾದಿ ಋಷಿಗಳು ಶ್ರೀರಾಮನನ್ನು ಸ್ತೋತ್ರಮಾಡಿದರು: 'ಹೇ ರಾಮ, ಗಂಡಸರಾಗಿ ಕಾಣುವವರೆಲ್ಲಾ ನೀನೇ, ಹೆಂಗಸರಾಗಿ ಕಾಣುವವರೆಲ್ಲಾ ಸೀತೆಯೇ. ನೀನು ಇಂದ್ರ, ಸೀತೆ ಇಂದ್ರಾಣಿ; ನೀನು ಶಿವ, ಸೀತೆ ಶಿವೆ; ನೀನು ನರ, ಸೀತೆ ನಾರಿ. ಹೆಚ್ಚಾಗಿ ಇನ್ನೇನು ತಾನೆ ನಾವು ಹೇಳೋಣ? ಗಂಡಸು ಎಲ್ಲೋ ಅಲ್ಲಿ ಇರತಕ್ಕವನು ನೀನೆ. ಹೆಂಗಸು ಎಲ್ಲೋ ಅಲ್ಲಿ ಇರತಕ್ಕವಳು ಸೀತೆಯೆ.''

— *ಶ್ರೀರಾಮಕೃಷ್ಣರು*